ದಿನಾಂಕ : 18-07-2004

**ಆಂದೋಲನ ದಿನಪತ್ರಿಕೆ**

ಪ್ರಸ್ತುತ (ಅಂಕಣ)

ಲಿಂಗದೇವರು ಹಳೆಮನೆ

## ಕನ್ನಡ ತಂತ್ರಾಂಶ ಅಭಿವೃದ್ಧಿಯ ಹಿಂದಿನ ಅಂತರ್ಜಾಲಗಳು.

ಬೆಂಗಳೂರು ಇಡೀ ಜಗತ್ತಿನಲ್ಲಿಯೇ 'ಸಿಲಿಕಾನ್ ಸಿಟಿ' ಎಂದು ಹೆಸರು ಗಳಿಸಿದೆ. ಕಂಪ್ಯೂಟರ್ ತಂತ್ರಾಂಶ ಅಭಿವೃದ್ಧಿಗೆ ಸಂಬಂಧಿಸಿದಂತೆ ಜಗತ್ತಿನ ನಕಾಶೆಯಲ್ಲಿ ಇದರ ಹೆಸರು ಎದ್ದು ಕಾಣುತ್ತಿದೆ. ನಾರಾಯಣಮೂರ್ತಿ, ಪ್ರೇಂಜಿಯವರು ಮುಖ್ಯಸ್ಥರಾಗಿರುವ ಎರಡು ಸಂಸ್ಥೆಗಳು ಇಡೀ ಜಗತ್ತಿನಾದ್ಯಂತ ತಮ್ಮ ಶಾಖೆಗಳನ್ನು ಹೊಂದಿವೆ. ಈ ಎರಡು ಪ್ರಸಿದ್ಧ ಸಂಸ್ಥೆಗಳಲ್ಲದೆ, ಲೆಕ್ಕವಿಲ್ಲದಷ್ಟು ಸಣ್ಣಪುಟ್ಟ ಸಂಸ್ಥೆಗಳು ಈ ಕ್ಷೇತ್ರದಲ್ಲಿ ಅತ್ಯಂತ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿವೆ. ಪ್ರತಿವರ್ಷ ನೂರಾರು ಮಂದಿ ಯುವಕ, ಯುವತಿಯರು ಬೆಂಗಳೂರಿನಿಂದ ಹೊರ ದೇಶಗಳಿಗೆ ಸಾಫ್ಟ್‌ವೇರ್ ಪರಿಣಿತರಾಗಿ ಹೋಗುತ್ತಿದ್ದಾರೆ. ಇನ್‌ಫೋಸಿಸ್‌ನಂತಹ ಸಂಸ್ಥೆ ಹೊರ ದೇಶಗಳ ಸರ್ಕಾರಗಳನ್ನೇ ಆಕರ್ಷಿಸುತ್ತಿದೆ. ಕೆಲವು ತಿಂಗಳುಗಳ ಹಿಂದೆ ಚೀನಾದ ತಂತ್ರಜ್ಞಾನ ವಿಭಾಗದ ಸಚಿವರೊಬ್ಬರು ಬೆಂಗಳೂರಿನ ಇನ್‌ಫೋಸಿಸ್‌ಗೆ ಭೇಟಿ ಇತ್ತಿದ್ದರು. ಆಗ ಅವರು ಕರ್ನಾಟಕ ರಾಜ್ಯದ ತಂತ್ರಜ್ಞಾನ ಮತ್ತು ಮಾಹಿತಿ ಸಚಿವರಿಗೆ ತಮ್ಮ ಭೇಟಿ ಬಗ್ಗೆ ಗೊತ್ತಾದ ಮೇಲೆ ನಮ್ಮ ಸಚಿವರು 'ನೋಡಿ, ಬೇರೆ ಬೇರೆ ದೇಶದ ಸಚಿವರು ನೇರವಾಗಿ ಇನ್‌ಫೋಸಿಸ್‌ಗೆ ಭೇಟಿ ನೀಡುತ್ತಾರೆ. ಅವರ್ಯಾರೂ, ಶಿಷ್ಟಾಚಾರದ ಸಂಪ್ರದಾಯಗಳನ್ನು ಪಾಲಿಸುವುದಿರಲಿ, ತಮ್ಮ ಭೇಟಿಯ ಬಗ್ಗೆ ನಮಗೆ ಮಾಹಿತಿಯನ್ನೂ ಕಳಿಸಿಲ್ಲ. ಇನ್‌ಫೋಸಿಸ್ ಇವತ್ತು ಅಷ್ಟೊಂದು ಪ್ರಭಾವಶಾಲಿಯಾಗಿದೆ' ಎಂದು ತಮ್ಮ ಸಮೀಪದವರ ಹತ್ತಿರ ಅಲವತ್ತುಕೊಂಡರಂತೆ.

ಕರ್ನಾಟಕ, ಬೆಂಗಳೂರು ಕಂಪ್ಯೂಟರ್ ತಂತ್ರಾಂಶ ಅಭಿವೃದ್ಧಿಯ ದೃಷ್ಟಿಯಿಂದ ಇಷ್ಟೆಲ್ಲಾ ಮುಂದುವರಿದಿರುವಾಗ, ಸಹಜವಾಗಿಯೇ ಹೊರಗಿನವರಿಗೆ ಇಲ್ಲಿಯ ಭಾಷೆಯಾದ ಕನ್ನಡ ತಂತ್ರಾಂಶ ಅಭಿವೃದ್ಧಿಯೂ ಬಹಳ ದೊಡ್ಡ ಪ್ರಮಾಣದಲ್ಲಿಯೇ ಆಗಿಬರಹುದೆಂಬ ಅಭಿಪ್ರಾಯ ಬರಲಿಕ್ಕೆ ಸಾಧ್ಯ. ಹಾಗೇನಾದರೂ ಯಾರಾದರೂ ಭಾವಿಸಿದ್ದರೆ ಅದು ಖಂಡಿತಾ ತಪ್ಪು ಅಭಿಪ್ರಾಯ. ಕನ್ನಡದ ತಂತ್ರಾಂಶ ಅಭಿವೃದ್ಧಿ ಅತ್ಯಂತ ಶೋಚನೀಯ ಪರಿಸ್ಥಿತಿಯಲ್ಲಿದೆ. ಮೇಲೆ ತಿಳಿಸಿದ ಈ ಯಾವ ಸಂಸ್ಥೆಗಳೂ ಕನ್ನಡ ತಂತ್ರಾಂಶ ಅಭಿವೃದ್ಧಿಯ ಬಗ್ಗೆ ಗಮನವನ್ನೇ ಹರಿಸಿಲ್ಲ. ತಮ್ಮ ತಮ್ಮ ಫೌಂಡೇಷನ್‌ಗಳ ಮುಖಾಂತರ ಸಾಕಷ್ಟು ಸಮಾಜ ಸೇವೆ ಮಾಡಲು ಮುಂದಾಗಿರುವ ಈ ಸಂಸ್ಥೆಗಳು ಇದೊಂದು ವಿಷಯದಲ್ಲಿ ಮಾತ್ರ ಯಾವ ಆಸಕ್ತಿಯನ್ನೂ ತಳೆದಿಲ್ಲ. ಇಂದು ಇಂಗ್ಲಿಷ್ ಭಾಷೆ ಜಾಗತಿಕವಾಗಿ ಕಂಪ್ಯೂಟರ್ ತಂತ್ರಾಂಶ ಬೆಳವಣಿಗೆಯಲ್ಲಿ ಪ್ರಧಾನವಾಗಿ ಬಳಕೆಯಾಗುತ್ತಿದೆ ನಿಜ. ಅಮೆರಿಕಾದ ಬಿಲ್‌ಗೇಟ್ಸ್‌ನ ಮೈಕ್ರೊ ಸಾಫ್ಟ್ ಸಂಸ್ಥೆ ಈ ಕ್ಷೇತ್ರದಲ್ಲಿ ಆಧಿಪತ್ಯ ಹೊಂದಿದೆ. ಆದರೆ ಇಂಗ್ಲಿಷ್ ಭಾಷೆಯ ಬಳಕೆಯ ಸದ್ದು ಹೊಡೆದು ಬೇರೆ ಭಾಷೆಗಳೂ ತಂತ್ರಾಂಶ ಅಭಿವೃದ್ಧಿ ಕ್ಷೇತ್ರದಲ್ಲಿ ಗಣನೀಯವಾಗಿ ಬಳಕೆಯಾಗುತ್ತಿವೆ. ಮೈಕ್ರೊ ಸಾಫ್ಟ್ ಕೊರಿಯಾ, ಚೀನಾ ಮತ್ತು ಜಪಾನ್‌ನಂತರಹ ದೇಶಗಳಿಗೆ ಪ್ರವೇಶ ಪಡೆದದ್ದು ಇತ್ತೀಚೆಗೆ. ಅದಕ್ಕೂ ಮೊದಲು ಈ ದೇಶಗಳು ತಮ್ಮದೇ ಆದ

ಭಾಷೆಗಳಲ್ಲಿ ಸಾಫ್ಟ್‌ವೇರ್‌ಗಳನ್ನು ಅಭಿವೃದ್ಧಿಪಡಿಸಿಕೊಂಡು ಬಳಕೆಯಲ್ಲಿ ತಂದಿದ್ದವು. ಅಷ್ಟೇ ಅಲ್ಲ, ಅವರುಗಳು ತಯಾರಿಸಿದ್ದ ಈ ತಂತ್ರಾಂಶ ಅಭಿವೃದ್ಧಿ ಅಂತಾರಾಷ್ಟ್ರೀಯ ದರ್ಜೆಗೆ ಅನುಗುಣವಾಗಿದ್ದವು. ಯೂರೋಪಿನಲ್ಲಿ ಕೂಡಾ ಸ್ಕ್ಯಾಂಡಿನೇವಿಯನ್ ದೇಶಗಳು ತಮ್ಮದೇ ಆದ ಭಾಷೆಯಲ್ಲಿ ತಂತ್ರಾಂಶ ಅಭಿವೃದ್ಧಿ ಯಾಕೆ ಆಗಿಲ್ಲ ಎಂಬ ಕುತೂಹಲ ಏಳುತ್ತದೆ. ಕಂಪ್ಯೂಟರ್ ಬಗ್ಗೆ ಇನ್ನೂ ಪ್ರಾರಂಭಿಕವಾದ ಕುತೂಹಲ ಇರುವ ನನ್ನಂಥವರು ಈ ರೀತಿಯ ಗೊಂದಲಗಳ ಹಿನ್ನೆಲೆಯಲ್ಲಿ ಯೋಚಿಸುವುದು ಸಹಜ. ಇಂಥ ಒಂದು ಕುತೂಹಲವೇ ನಮ್ಮನ್ನು ಇಂದು ಕನ್ನಡ ತಂತ್ರಾಂಶ ಅಭಿವೃದ್ಧಿಯ ಹಿಂದಿರುವ ಅಂತರ್ಜಾಲಗಳ ಪರಿಚಯ ಮಾಡಿಸುತ್ತಿದೆ.

ಕನ್ನಡ ತಂತ್ರಾಂಶ ಅಭಿವೃದ್ಧಿಯನ್ನು ನೋಡಬೇಕಾದದ್ದು ಎರಡು ದೃಷ್ಟಿಯಿಂದ. ಮೊದಲನೆಯದು, ಮೂಲಭೂತ ಸಂಶೋಧನೆ ಮತ್ತು ಅಭಿವೃದ್ಧಿ. ಎರಡನೆಯದು ಅನ್ವಯಿಕ ತಂತ್ರಾಂಶದ ಬೆಳವಣಿಗೆ. ಈ ಎರಡೂ ಕ್ಷೇತ್ರಗಳಲ್ಲಿ ನಾವು ತೃಪ್ತಿಕರವಾದ ಸಾಧನೆಗಳನ್ನು ಮಾಡಲು ಸಾಧ್ಯವಾಗಿಲ್ಲ. ಭಾರತದ ಬೇರೆ ಭಾಷೆಗಳಿಗೆ ಹೋಲಿಸಿಕೊಂಡರೆ, ನಮ್ಮ ಸಾಧನೆ ಅತೃಪ್ತಿಯನ್ನೇ ಹುಟ್ಟು ಹಾಕುತ್ತದೆ. ಇದರ ಬಗ್ಗೆ ಆಸಕ್ತಿ ಹೊಂದಿ ಏನಾದರೂ ಮಾಡಬೇಕೆಂದು ಹೊರಟ ಅನೇಕ ಜನ ಪರಿಣಿತರು ಭ್ರಮನಿರಸರಾಗಿದ್ದಾರೆ. ಕಡೆಗೆ ಇದರ ಸಹವಾಸವೇ ಬೇಡ ಎಂದು ಸುಮ್ಮನಾಗಿದ್ದಾರೆ. ಯಾಕೆ ಈ ರೀತಿಯ ಬೆಳವಣಿಗೆಗಳಾದವು ಎಂಬುದರ ಬಗ್ಗೆ ಕನ್ನಡ ಅಭಿವೃದ್ಧಿಯ ಬಗ್ಗೆ ಆಸಕ್ತಿ ಇರುವ ಪ್ರತಿಯೊಬ್ಬ ಕನ್ನಡಿಗರೂ ಚಿಂತಿಸಬೇಕಾಗಿದೆ. ಇಂದು ಕನ್ನಡದ ಬಗೆಗಿನ ಹೋರಾಟ ಬರೀ ಬೀದಿಗಳಲ್ಲಿ ಮಾತ್ರ ನಡೆದರೆ ಸಾಲದು; ಕಂಪ್ಯೂಟರ್ ಲ್ಯಾಬ್‌ಗಳಲ್ಲಿ ಕೂಡಾ ಆಗಬೇಕಾಗಿದೆ. ಕಳೆದ ಎರಡು ತಿಂಗಳಿಂದ ಕನ್ನಡದ ಈ ರೀತಿಯ ಸ್ಥಿತಿಯ ಬಗ್ಗೆ ಒಂದು ಹೋರಾಟ ಅಂತರ್ಜಾಲದಲ್ಲಿ ಪ್ರಾರಂಭವಾಗಿದೆ. ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮುದ್ರಣ ಮಾಧ್ಯಮದ ಬಗ್ಗೆ ಮಾತ್ರ ಆಸಕ್ತಿ ಹೊಂದಿರುವ ನಮಗೆ ಈ ಕಂಪ್ಯೂಟರ್ ಅಂತರ್ಜಾಲದ ಬಗ್ಗೆ ಅಲ್ಲಿ ನಡೆಯುತ್ತಿರವ ಕನ್ನಡದ ಬಗೆಗಿನ ಹೋರಾಟದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಕನ್ನಡದ ಇಂದಿನ ಬೆಳವಣಿಗೆಯಲ್ಲಿ ತಂತ್ರಾಂಶ ಅಭಿವೃದ್ಧಿಯೂ ಒಂದು ಮಹತ್ವದ ಅಂಗ ಎಂದು ಪರಿಭಾವಿಸುವ ಸಮಯ ಈಗ ತುರ್ತಾಗಿ ಇದೆ.

ಇದ್ದಕ್ಕಿದ್ದಂತೆ ಕಂಪ್ಯೂಟರ್ ಅಂತರ್ಜಾಲದಲ್ಲಿ ಕನ್ನಡ ತಂತ್ರಾಂಶ ಅಭಿವೃದ್ಧಿಯ ಬ್ಗಗೆ ಈ ರೀತಿಯ ಬಿರುಗಾಳಿ ಏಳುವುದಕ್ಕೆ ಒಂದು ಹಿನ್ನೆಲೆ ಇದೆ. ಕೆಲವು ತಿಂಗಳುಗಳ ಹಿಂದೆ ಪೂರ್ಣಚಂದ್ರ ತೇಜಸ್ವಿಯವರು ನನಗೆ ಫೋನ್ ಮಾಡಿದರು. ಒಂದು ದಿನ ಬಿಡುವು ಮಾಡಿಕೊಂಡು ಮೂಡಿಗೆರೆಗೆ ಬರಲು ಸಾಧ್ಯವಾ? ಎಂದು ಕೇಳಿದರು. ಕನ್ನಡ ಸಾಫ್ಟ್‌ವೇರ್ ಬಗ್ಗೆ ಒಬ್ಬ ಬಳಕೆದಾರನಾಗಿ ನನ್ನದೇ ಆದ ಕೆಲವು ಸಮಸ್ಯೆಗಳಿವೆ. ಅವು ಹೆಚ್ಚೂ ಕಡಿಮೆ ಎಲ್ಲಾ ಬಳಕೆದಾರರ ಸಾಮಾನ್ಯ ಸಮಸ್ಯೆಗಳೂ ಕೂಡಾ. ಅವುಗಳ ಬಗ್ಗೆ ಚರ್ಚಿಸಿ ಏನಾದರೂ ಮಾಡಬೇಕಾಗಿದೆ. ಬನ್ನಿ ಎಂದರು. ಕನ್ನಡ ಸಾಫ್ಟ್‌ವೇರ್ ಬಗ್ಗೆ ಇರುವ ಸಮಸ್ಯೆಗಳ ಬಗ್ಗೆ ಅಲ್ಪಸ್ವಲ್ಪ ಪರಿಚಯ ನನುಗೆ ಇತ್ತಾದರೂ ಅವುಗಳ ಬಗ್ಗೆ ಗಂಭೀರವಾಗಿ ನಾನು ಯೋಚಿಸಿರಲಿಲ್ಲ. ಆಗ ನಾನು ಬೇರೆ ಕೆಲಸಗಳಲ್ಲಿ ಬಿಡಿ ಇದ್ದುದರಿಂದ ಒಂದೆರಡು ವಾರ ಬಿಟ್ಟು ಬರುತ್ತೇನೆ ಎಂದೆ. ಮುಂದಿನ ಒಂದೆರಡು ವಾರಗಳಲ್ಲೂ ಹೋಗಲಾಗಲಿಲ್ಲ. ಆದರೆ ತೇಜಸ್ವಿಯವರು ಬಿಡಬೇಕಲ್ಲ! ನನಗೆ ಫೋನ್ ಮಾಡಿ ಪ್ರಯೋಜನವಿಲ್ಲ ಎಂದುಕೊಂಡು ಅವರ ಗೆಳೆಯರಾದ ರಾಮದಾಸ್ ಮತ್ತು ಶ್ರೀರಾಮ್‌ಗೆ ಫೋನ್ ಮಾಡಿ 'ಆ ಹಳೇಮನೇನ ಕಳಿಸಿಕೊಡ್ರೊ ಮಾರಾಯರ' ಎಂದು ಕೇಳಿದರು. ರಾಮದಾಸ್ ಅಂತೂ ತಮ್ಮ ವಿಶಿಷ್ಟ ಶೈಲಿಯಲ್ಲಿ "ಹೋಗಿ ಬನ್ರಿ; ತೇಜಸ್ವಿಯವರು ಆತ್ಮಕ್ಕಾದರೂ ಶಾಂತಿ ಸಿಗಲಿ" ಅಂದರು. ಕಡೆಗೆ ತೇಜಸ್ವಿಯವರು ಶ್ರೀರಾಮ್‌ಗೆ "ಅವನನ್ನ ಎತ್ತಿ ಹಾಕ್ಕೊಂಡು ಬನ್ರಿ" ಅಂದಿರಬೇಕು. ಶ್ರೀರಾಮ್ ಒಂದು ದಿನ ನಿಗದಿಪಡಿಸಿ 'ನಡೀರಿ' ಅಂದರು. ಹೀಗೆ

ನಾನು ಮೂಡಿಗೆರೆಗೆ ಹೋಗಿ ತೇಜಸ್ವಿಯವರೊಂದಿಗೆ ಚರ್ಚಿಸಿದೆ. ನಮ್ಮ ಇರಾದೆ ಇದ್ದದ್ದು ಕನ್ನಡ ತಂತ್ರಾಂಶ ಈಗ ಇರುವ ಎಲ್ಲಾ ಅಂತಾರಾಷ್ಟ್ರೀಯ ದರ್ಜೆಯನ್ನೂ ಒಳಗೊಂಡಿರಬೇಕು ಎಂಬುದು. ಅಲ್ಲದೆ ಕೀಲಿಮಣೆಯಲ್ಲಿ ಇರುವ ವಿವಿಧ ವಿನ್ಯಾಸಗಳು ಕೊಡುತ್ತಿರುವ ಸಮಸ್ಯೆಗಳನ್ನು ಹೇಗೆ ಬಗೆಹರಿಸಿಕೊಳ್ಳಬಹುದು ಎಂಬುದೂ ಕೂಡಾ. ಎಷ್ಟೋ ಬಾರಿ ನಾವು ಸಿದ್ಧಪಡಿಸುವ ಪಠ್ಯ ಯಾವುದಾದರೂ ಒಂದು ನಮೂನೆಯ  ಫಾರ್ಮ್ಯಾಟ್‌ನಲ್ಲಿದ್ದರೆ ಅದನ್ನು ತೆರೆಯಲು ಅದೇ ಫಾರ್ಮ್ಯಾಟ್ ಹುಡುಕಿಕೊಂಡು ಹೋಗಬೇಕಿದೆ. ಅದಕ್ಕೆ ಒಂದು ಯೂನಿಕೋಡ್ ವ್ಯವಸ್ಥೆ ಸಾಧ್ಯ ಇಲ್ಲವೆ? ಇವು ಬಾಲಿಶವಾದ ಅಥವಾ ಪ್ರಾಥಮಿಕ ಹಂತದ ಯೋಚನೆಗಳೇ ಇರಬಹುದು. ಆದರೆ ಬಳಕೆದಾರರ ದೃಷ್ಟಿಯಿಂದ ಇವು ಮಹತ್ವದ ಅಂಶಗಳಾಗಿದ್ದವು. ಇಡೀ ದಿನ ಚರ್ಚೆ ಮಾಡಿ ಕಡೆಗೂ ಏಳೆಂಟು ಅಂಶಗಳನ್ನು ನಾವು ಪಟ್ಟಿ ಮಾಡಿದೆವು. ತೇಜಸ್ವಿಯವರಿಗೆ ಈ ಸಮಸ್ಯಾ ಪಟ್ಟಿಯನ್ನು ಸಲಹೆಯ ರೂಪದಲ್ಲಿ ಕರ್ನಾಟಕ ಸರ್ಕಾರದ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಗೆ ಕಳಿಸಬೇಕೆಂಬ ಮನಸ್ಸಿತ್ತು. ಇದನ್ನು ಕುರಿತಾಗಿ ಅವರು ಕನ್ನಡದ ಹಿರಿಯ ವಿದ್ವಾಂಸರಾದ ಪ್ರೊ. ಜಿ. ವೆಂಕಟಸುಬ್ಬಯ್ಯನವರ ಹತ್ತಿರ ಕೂಡಾ ಚರ್ಚಿಸಿದ್ದರು. ವೆಂಕಟ ಸುಬ್ಬಯ್ಯನವರು ಸಹಿ ಹಾಕಲು ಕೂಡಾ ಒಪ್ಪಿದ್ದರು. ನಾನು ಮೂಡಿಗೆರೆಯಿಂದ ಹೊರಡುವ ಸಮಯದಲ್ಲಿ ತೇಜಸ್ವಿಯವರು 'ರೀ, ನಾವಿಬ್ಬರೆ ಕೂತು ಈ ಸಮಸ್ಯೆಗಳ ಪಟ್ಟಿ ತಯಾರಿಸಿದೀವಿ. ಇದನ್ನು ಇನ್ನೂ ಹೆಚ್ಚಿನ ಆಸಕ್ತರೊಂದಿಗೆ ಚರ್ಚಿಸಿದರೆ ಒಳ್ಳೆಯದು. ನೀವು ನಿಮ್ಮ ಸಂಸ್ಥೆಯಿಂದ ಒಂದು ಸಭೆ ಕರೆಯಲು ಸಾಧ್ಯವಾ?' ಅಂತ ಕೇಳಿದರು. ಅದಕ್ಕೇನಂತೆ ಆಗಲಿ ಸಾರ್ ಅಂದು ಬಂದೆ. ಸಭೆಯನ್ನು ಈಗ ಕರೆದರಾಯಿತು, ಆಗ ಕರೆದರಾಯಿತು ಎಂದು ನನ್ನ ಕೆಲಸದಲ್ಲಿ ತೊಡಗಿಕೊಂಡೆ. ತೇಜಸ್ವಿಯವರ ಒತ್ತಾಯ ಮುಂದುವರೆಯಿತು. ಹಿಡಿದ ಕೆಲಸಕ್ಕೆ ಒಂದು ಮುಕ್ತಿ ಕಾಣಿಸದ ಹೊರತು ಅವರಿಗೆ ಸಮಾಧಾನ ಇಲ್ಲ. ಅಂತೂ ಕಡೆಗೆ ಮೇ ೨೫ ರಂದು ನಾನು ಸಭೆ ಕರೆದೆ. ಆ ಸಭೆಗೆ ಕನ್ನಡ ಗಣಕ ಪರಿಷತ್ತಿನ ಸದಸ್ಯರು, ಕೆಲವು ಸಾಫ್ಟ್‌ವೇರ್ ಇಂಜಿನಿಯರ್‌ಗಳು ಮತ್ತು  ಇನ್ನಿತರ ಆಸಕ್ತರನ್ನು ಆಮಂತ್ರಿಸಿದೆ. ಮುಂದೆ ಕನ್ನಡ ತಂತ್ರಾಂಶ ಅಭಿವೃದ್ಧಿಗೆ ಸಂಬಂಧಿಸಿದಂತೆ ದೊಡ್ಡ ವಿವಾದವನ್ನೇ ಸೃಷ್ಟಿಸಬಹುದು ಎಂಬ ಯಾವ ಅರಿವೂ ಇಲ್ಲದೆ, ನಾನು ಆ ಸಭೆಯನ್ನು ಕರೆದಿದ್ದೆ. ಆ ಸಭೆಯ ನಂತರದ ಬೆಳವಣಿಗೆ ಮಾತ್ರ ನನ್ನನ್ನೂ, ತೇಜಸ್ವಿಯವರನ್ನೂ ದಂಗು ಬಡಿಸಿತು.

ಕನ್ನಡ ಗಣಕ ಪರಿಷತ್ತು ಒಂದು ನೋಂದಾಯಿತ ಸ್ವಾಯತ್ತ ಸಂಸ್ಥೆ. ಇಂದು ಅದು ಕನ್ನಡ ತಂತ್ರಾಂಶ ಅಭಿವೃದ್ಧಿಯಲ್ಲಿ ಪ್ರಧಾನ ಪಾತ್ರವಹಿಸುತ್ತಿದೆ. 'ನುಡಿ' ಎಂಬ ತಂತ್ರಾಂಶವನ್ನು ಅದು ಅಭಿವೃದ್ಧಿಗೊಳಿಸಿ ಬಿಡುಗಡೆ ಮಾಡಿದೆ. ಅದರ ಬಳಕೆ ಪ್ರಧಾನವಾಗಿ ಸರ್ಕಾರಿ ವಲಯಗಳಲ್ಲಿ ಆಗುತ್ತಿದೆ. ಅಲ್ಲದೆ ಕರ್ನಾಟಕ ಸರ್ಕಾರ ಕನ್ನಡಕ್ಕೆ ಸಂಬಂಧಪಟ್ಟ ಯಾವುದೇ ತಂತ್ರಾಂಶವನ್ನು ಯಾವುದೇ ಖಾಸಗಿ ಸಂಸ್ಥೆ ತಯಾರಿಸಿದರೂ ಅದನ್ನು ಪ್ರಮಾಣೀಕರಿಸುವ ಅಧಿಕಾರವನ್ನು ಈ ಸಂಸ್ಥೆಗೆ ನೀಡಿದೆ. ಇದರಿಂದಾಗಿ ಕನ್ನಡ ಗಣಕ ಪರಿಷತ್ತಿಗೆ ಒಂದು ವಿಶೇಷವಾದ ಸ್ಥಾನಮಾನ ಇದೆ. ಅಂದಿನ ಸಭೆಯಲ್ಲಿ ಡಾ. ಪವನಜ ಮತ್ತು ಸತ್ಯನಾರಾಯಣ ಎಂಬಿಬ್ಬರು ಸಾಫ್ಟ್‌ವೇರ್ ಇಂಜಿನಿಯರುಗಳು ಭಾಗವಹಿಸಿದ್ದರು. ಇವರಿಬ್ಬರೂ ಕನ್ನಡ ತಂತ್ರಾಂಶದ ಕ್ಷೇತ್ರದಲ್ಲಿ ಗಣನೀಯವಾದ ಸೇವೆ ಮಾಡಿದವರು. ಪವನಜ ಅವರಂತೂ ಈ ಕ್ಷೇತ್ರದ ಬಗ್ಗೆ ಕನ್ನಡದಲ್ಲಿ ಬರೆಯುತ್ತಲೂ ಇದ್ದಾರೆ. ಅವರು ಅಂದಿನ ಸಭೆಯಲ್ಲಿ ನಾವು ಎತ್ತಿದ ಸಮಸ್ಯೆಗಳ ಬಗ್ಗೆ ವಿವರವಾದ ಮಾಹಿತಿ ನೀಡಿದರು. ಸಭೆಯಲ್ಲಿ ಚರ್ಚೆ  ನಡೆಯುವ ಸಂದರ್ಭದಲ್ಲಿ ಗಣಕ ಪರಿಷತನ್ನು ಪ್ರತಿನಿಧಿಸಿದ್ದ ಶ್ರೀನಾಥಶಾಸ್ತ್ರಿಯವರಿಗೂ ಡಾ. ಪವನಜ  ಅವರಿಗೂ ಸಣ್ಣಪುಟ್ಟ ಮಾತಿನ ಚಕಮಕಿಗಳೂ ಆದವು. ಡಾ. ಪವನಜ ಪ್ರಾರಂಭದಲ್ಲಿ ಗಣಕ ಪರಿಷತ್ತಿನಲ್ಲಿ ಇದ್ದವರು. ಕ.ಗ.ಪ. ಮೊದಲು ಕೈಗೆತ್ತಿಕೊಂಡ ಕನ್ನಡ ಲಿಪಿ ತಂತ್ರಾಂಶ (ಕಲಿತ)ದ ನಿರ್ಮಾಣದಲ್ಲಿ ಭಾಗಯಾಗಿದ್ದವರು. ಅನಂತರದಲ್ಲಿ ಕ.ಗ.ಪ.ದ ಪದಾಧಿಕಾರಿಗಳೊಂದಿಗೆ  ವಿವಾದ ಏರ್ಪಟ್ಟು

ಹೊರ ಬಂದವರು. ಚರ್ಚೆಯ ಸಂದರ್ಭದಲ್ಲಿ ಮುಖ್ಯವಾಗಿ ಎತ್ತಿದ ಇನ್ನೊಂದು ಅಂಶವೆಂದರೆ, ಖಾಸಗಿ ಸಂಸ್ಥೆಗಳು ಯಾಕೆ ಕನ್ನಡ ತಂತ್ರಾಂಶದ ಅಭಿವೃದ್ಧಿಯಲ್ಲಿ ಮುಂದೆ ಬರುವಲ್ಲಿ ಅವಕ್ಕೆ ಕ.ಗ.ಪ. ಅಡ್ಡಗಾಲು ಹಾಕುತ್ತಿದೆ ಎಂಬ ದೂರೂ ಕಾಡಾ ವ್ಯಾಪಕವಾಗಿದೆ. ್ಂದರೆ ಕನ್ನಡ ತಂತ್ರಾಂಶ ಬಳಕೆಯಲ್ಲಿ ದೊಡ್ಡ ಗ್ರಾಹಕನಾಗಿುವ ಕರ್ನಾಟಕ ಸರ್ಕಾರ ಖಾಸಗಿ ಸಂಸ್ಥೆಗಳು ತಯಾರಿಸಿದ ತಂತ್ರಾಂಶವನ್ನು ಬಳಸದಂತೆ ಕ.ಗ.ಪ. ನೋಡಿಕೊಳ್ಳುತ್ತಿದೆಯೇ? ಇಂಥ ಅನೇಕ ಅನುಮಾನಗಳು ಅಂದಿನ ಸಭೆಯಲ್ಲಿ ಮೂಡಿದ್ದಂತೂ ನಿಜ. ಕನ್ನಡ ತಂತ್ರಾಂಶದಲ್ಲಿ ಯೂನಿಕೋಡ್ ವ್ಯವಸ್ಥೆ  ಇರಬೇಕು ಎಂಬ ವಿಚಾರ ಬಂದಾಗ ಕೂಡಾ ಖಾಸಗಿ ಸಂಸ್ಥೆಗಳು ಅದನ್ನು ಅಭಿವೃದ್ಧಿ ಪಡಿಸಲು ಸಹಕರಿಸುತ್ತಿಲ್ಲ ಎಂಬ ಉತ್ತರ ಬಂತು. ಮಾರುಕಟ್ಟೆ, ಲಾಭ ಇದ್ದರೆ ತಾನೇ ಖಾಸಗಿ ಸಂಸ್ಥೆಗಳು ಸಹಕರಿಸುವುದು. ಇಂದು ಖಾಸಗಿ ವಲಯಗಳಲ್ಲಿ, ಮುದ್ರಣ ಉದ್ಯಮದಲ್ಲಿ ಜನಪ್ರಿಯವಾಗಿರುವುದು ಗಣಕಪರಿಷತ್ತು ಅಭಿವೃದ್ಧಿ ಪಡಿಸಿದ 'ನುಡಿ' ತಂತ್ರಾಂಶ ಅಲ್ಲ; ಖಾಸಗಿಯವರು ಅಭಿವೃದ್ಧಿ ಪಡಿಸಿದ ಶ್ರೀಲಿಪಿ, ಪ್ರಕಾಶಕ್ ಮುಂತಾದ ತಂತ್ರಾಂಶಗಳು. ಅವುಗಳ ಅಕ್ಷರ ವಿನ್ಯಾಸ ಆಕರ್ಷಕವಾಗಿವೆ. ಆದರೆ ಅವರ್ಯಾರು ತಮ್ಮ ತಂತ್ರಾಂಶಗಳನ್ನು ಹೆಚ್ಚು ಅಭಿವೃದ್ಧಿಪಡಿಸುವತ್ತ ಆಸಕ್ತಿ ವಹಿಸುತ್ತಿಲ್ಲ. ಇದ್ಯಾವುದರ ಬಗ್ಗೆಯೂ ಕ.ಗ.ಪ.ದವರು ಸಭೆಯಲ್ಲಿ ಸಮಂಜಸ ಉತ್ತರ ನೀಡಲಿಲ್ಲ.

ಸಭೆಯ ನಂತರ ಸಭೆಯ ನಡಾವಳಿಗಳನ್ನು ನಾನು ಎಲ್ಲರಿಗೂ ಕಳಿಸಿ ಕೊಟ್ಟೆ. ಅದರಲ್ಲಿ ನಾನು 'ಈ ಸಭೆ ಮಹತ್ವದ್ದೇನನ್ನೂ ಸಾಧಿಸದಿದ್ದರೂ ಜೇನು ಹುಟ್ಟಿಗೆ ಕಲ್ಲು ಹೊಡೆಯುವ ಕೆಲಸ ಮಾಡಿದೆ' ಅಂದುಕೊಂಡಿದ್ದೇನೆ ಎಂದು ಬರೆದಿದ್ದೆ. ಅದು ನಿಜವೇ ಆಯಿತು. ಈ ನಡಾವಳಿಯನ್ನು ಡಾ. ಪವನಜ ಅವರು ಅಂತರ್ಜಾಲಕ್ಕೆ ಹಾಕಿದ್ದಾರೆ. ಹೊರ ದೇಶಗಳಲ್ಲಿರುವ ಕನ್ನಡ ಸಾಫ್ಟ್‌ವೇರ್ ಎಂಜಿನಿಯರುಗಳ ಗಮನಕ್ಕೆ ಬಂದಿದ್ದೇ ತಡ ಪ್ರತಿಕ್ರಿಯೆಗಳು ಬರಲಾರಂಭಿಸಿದವು. ಮುಖ್ಯವಾಗಿ ಅಮೇರಿಕಾದಲ್ಲಿರುವ ಕುಮಾರಸ್ವಾಮಿ ಮತ್ತು ಅವರ 'ಇ-ಕವಿ' ಟ್ರಸ್ಟ್ ಇದನ್ನೊಂದು ಅತ್ಯಂತ ಪ್ರಮುಖ ವಿಷಯವನ್ನಾಗಿ ಎತ್ತಿಕೊಂಡಿತು. ಕನ್ನಡ ತಂತ್ರಾಂಶ ಅಭಿವೃದ್ಧಿಯ ಬಗ್ಗೆ ಏನೂ ಮಾಡಲು ಸಾಧ್ಯವಿಲ್ಲ ಎಂದು ಭ್ರಮನಿರಸನರಾಗಿದ್ದ ಅನೇಕ ಜನ ತಂತ್ರಜ್ಞರು ಇದ್ದಕ್ಕಿದ್ದಂತೆ  ಪ್ರತಿಕ್ರಿಯಿಸತೊಡಗಿದರು. ರಾತ್ರೋರಾತ್ರಿ ಅವರ ಕಣ್ಣಲ್ಲಿ ನಾನು, ತೇಜಸ್ವಿ ಕನ್ನಡ ತಂತ್ರಾಂಶ ಅಭಿವೃದ್ಧಿಯ  ಪುನರುಜ್ಜೀವಕರಾಗಿ ಕಂಡು ಬಂದೆವು. ಈ ಮಧ್ಯೆ ನಮಗೆ ತಿಳಿಯದ ಅನೇಕ ಆಘಾತಕಾರೀ ವಿಷಯಗಳು ಒಂದೊಂದಾಗಿ ನಮಗೆ ತಿಳಿಯ ತೊಡಗಿದವು. ಅದರಲ್ಲಿ ಮುಖ್ಯವಾದದ್ದು ಕನ್ನಡ ಗಣಕ ಪರಿಷತ್ತು ಅಭಿವೃದ್ಧಿ ಪಡಿಸಿದ 'ನುಡಿ' ಕದ್ದದ್ದು ಎಂಬುದು. ಕ.ಗ.ಪ. ಆನಂದ್ ಎಂಬುವರು ವಿನ್ಯಾಸಗೊಳಿಸಿದ 'ಆಕೃತಿ' ಫಾಂಟುಗಳನ್ನು ಅವರ ಅನುಮತಿ ಪಡೆಯದೆ ಬಳಸಿಕೊಂಡಿದೆ ಮತ್ತು ಅದು ತಾವೇ ಅಭಿವೃದ್ಧಿಗೊಳಿಸಿದ್ದು ಎಂದು ಹೇಳಿಕೊಂಡಿದೆ ಎಂಬ ಆರೋಪ ಬಲವಾಗಿದೆ. ಆ ದೃಷ್ಟಿಯಿಂದಲೇ ಅದು 'ನುಡಿ' ತಂತ್ರಾಂಶವನ್ನು ಮುಕ್ತ ತಂತ್ರಾಂಶವಾಗಿ ಇಡಲು ಸಿದ್ಧವಿಲ್ಲ ಎಂಬುದು ಪವನಜ ಮತ್ತು ಕುಮಾರಸ್ವಾಮಿಯವರ ಆರೋಪ. ನಮ್ಮ ಸಭೆಯಲ್ಲಿ ಏನೂ ಮಾತನಾಡದಿದ್ದ ಕ.ಗ.ಪ. ಪ್ರತಿನಿಧಿಗಳು ಈ ಎಲ್ಲಾ ವಿವಾದ ಪ್ರಾರಂಭವಾದ ಮೇಲೆ ನನ್ನ ಕಡೆ ಬಂದರು. ತೇಜಸ್ವಿ ಮತ್ತು ನೀವು ಸಮಸ್ಯೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ತೇಜಸ್ವಿಯವರಿಗೆ ನಾವು ವಿವರಿಸಿ ಹೇಳಬೇಕು. ಒಂದು ಅಪಾಯಿಂಟ್‌ಮೆಂಟ್ ಕೊಡಿಸಿ ಕೊಡಿ ಎಂದರು. ನೀವು ಹೇಳಬೇಕಾದ್ದನ್ನು ಸಭೆಯಲ್ಲಿಯೇ ಹೇಳಬೇಕಿತ್ತು. ನೀವೇ ತೇಜಸ್ವಿಯವರೊಂದಿಗೆ ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಭೇಟಿ ಮಾಡಿ ಎಂದೆ. ಅದರಂತೆ ಅವರು ಮೂಡಿಗೆರೆಗೆ ಹೋಗಿ ಚರ್ಚಿಸಿಯೂ ಬಂದರು. ತೇಜಸ್ವಿಯವರ ನಿಲುವಿನಲ್ಲಿ ಯಾವ ಬದಲಾವಣೆಯೂ ಕಂಡು ಬರಲಿಲ್ಲ. ಕ.ಗ.ಪ. ಏನಾದರೂ ಮಾಡಲಿ, ಕನ್ನಡದ ಮಾಹಿತಿ ತಂತ್ರಜ್ಞಾನದ ಬೆಳವಣಿಗೆ ಬೇರೆಯದೇ ಆದ ಒಂದು ಸಲಹಾ ಸಮಿತಿ ಇರಬೇಕೆಂಬುದು ಅವರ ವಾದ. ವಾದ ವಿವಾದಗಳು ಎದ್ದಿವೆ. ಕನ್ನಡ ತಂತ್ರಾಂಶದ ಬಗ್ಗೆ ಆಸಕ್ತಿ ಇರುವ

ದೂರದ, ಸಮೀಪದ ಎಲ್ಲಾ ಸಾಫ್ಟ್‌ವೇರ್ ಪರಿಣಿತರೂ ತಮ್ಮ ವಾದವನ್ನು ಹರಿತವಾದಿ ಭಾಷೆಯಲ್ಲಿ ಮಂಡಿಸುತ್ತಿದ್ದಾರೆ. ಅವರ ಭಾಷೆ, ನಿಲುವು, ಉಗ್ರರೂಪ ಕಂಡು ನಾನು, ತೇಜಸ್ವಿ ಹೌಹಾರಿದ್ದೇವೆ. ಇದಕ್ಕೇನಾದರೂ ಒಂದು ದಡ ಮುಟ್ಟಿಸಬೇಕೆಂದು ತೇಜಸ್ವಿಯವರ ಯೋಚನೆ.

ಅವರು ಫೋನ್ ಮಾಡಿ, 'ಏನು ಮಾರಾಯ, ನಾವೇನೋ ನಮ್ಮ ಸಮಸ್ಯೆ ಅಂತ ಕೈ ಹಾಕಿದರೆ ಇದು ಎಲ್ಲೆಲ್ಲಿಗೊ ಹೋಗಿ ಬಿಡ್ತು. ಈಗ ಉಪಸಂಹಾರ ಹೇಗೆ?' ಅಂದರು. ನನಗೆ ಏನು ಹೇಳಬೇಕು ಅನ್ನೋದು ತೋಚದೆ, ತಕ್ಷಣ 'ಯಾರದಾದರೂ ಸಂಹಾರ ಆದರೆ, ತಾನೇ ತಾನಾಗಿ ಉಪಸಂಹಾರ ಆಗುತ್ತೆ ಬಿಡಿ' ಅಂದೆ.

ಮುಂದಿನ ಸಭೆ ಕರೆಯಲು ಸಜ್ಜಾದೆ. ಆ ಸಭೆ ಇನ್ಯಾವ ದಿಕ್ಕಿನಲ್ಲಿ ಬೆಳೆಯುತ್ತದೋ ಗೊತ್ತಿಲ್ಲ. ಅಂತರ್‌ಜಾಲಗಳೇ ಹಾಗೆ ತಾನೆ!